International Journal of Kannada Research
www.kannadajournal.com

**ISSN: 2454–5813**
IJKR 2020; 6(3): 30-32
© 2020 IJKR
www.kannadajournal.com
Received: 22-05-2020
Accepted: 24-06-2020

**ಡಾ. ಬಿ. ಪಿ. ಮಠದ**
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಧಾರವಾಡ

**Corresponding Author:**
**ಡಾ. ಬಿ. ಪಿ. ಮಠದ**
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಧಾರವಾಡ

# ವಚನಕಾರರ ಸಾಮಾಜಿಕ ಪ್ರಸ್ತುತತೆ

**ಡಾ. ಬಿ. ಪಿ. ಮಠದ**

ವಿಶ್ವಸಾಹಿತ್ಯಕ್ಕೆ ಕನ್ನಡದ ಕಾಣಿಕೆ ಈ ಶರಣರ ವಚನಗಳು, ಈ ವಚನಗಳನ್ನು 12ನೆ ಶತಮಾನದಲ್ಲಿ ಬರೆದವರು ವಚನಕಾರರು. ಈ ವಚನಗಳ ಸಾರ ಎಂದೆಂದಿಗೂ ಪ್ರಸ್ತುತ. ಈ ಜಗದ ಜನ ಸಾಮಾನ್ಯರ ಬದುಕು–ಬವಣೆಗಳ ಬಗ್ಗೆ ಸ್ಪಂದಿಸಿ ವಚನಗಳನ್ನು ರಚಿಸಿದ್ದಾರೆ. ರಾಜರ ಮತ್ತುದೇವ ಭಾಷೆಗಳ ಹಂಗುದೊರೆದು, ಅನುಭಾವದ ಹಿನ್ನೆಲೆಯಲ್ಲಿನಡೆದಂತೆ ನುಡಿದು, ನುಡಿದಂತೆ ನಡೆದು ಜನ ಸಾಮಾನ್ಯರಿಗೆ ಜೀವನದ ಸನ್ಮಾರ್ಗ ತೋರಿದ ದಾರಿ ದೀಪಗಳೇ ವಚನಕಾರರು.

ಅಲ್ಲಮಪ್ರಭು, ಬಸವಣ್ಣ, ಮಾದರ ಚನ್ನಯ್ಯಾ, ಡೋಹರ ಕಕ್ಕಯ್ಯ, ಮಡಿವಾಳ ಮಾಚಿದೇವ, ಆಯ್ದಕ್ಕಿ ಮಾರಯ್ಯ, ಅಕ್ಕಮಹಾದೇವಿ, ಆಯ್ದಕ್ಕಿ ಅಕ್ಕಮ್ಮ, ಮುಕ್ತಾಯಕ್ಕ, ಸಿದ್ದರಾಮ ಮುಂತಾದವರು, ತಮ್ಮ ಅನುಭವಗಳನ್ನೆ ಸರಳ ಭಾಷೆಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಸಮಾಜದ ಜಾಡ್ಯ ತೊಡೆದು ಹಾಕಲು, ಜನರಲ್ಲಿ ಜಾಗೃತಿ ಮೂಡಿಸಲು, ಸಮಾಜದ ಸುಧಾರಣೆಯನ್ನೇ ಮುಖ್ಯ ಧ್ಯೇಯವಾಗಿರಿಸಿಕೊಂಡು; 'ವಚನ' ಮಾಧ್ಯಮದ ಮೂಲಕ ಜನರನ್ನು ತಲುಪವಲ್ಲಿ ವಚನಕಾರರು ಯಶಸ್ವಿಯಾಗಿದ್ದಾರೆ. ಅಲ್ಲದೆ ತಮ್ಮ ಕಾಯಕ ನಿಷ್ಠೆಯ ಮೂಲಕ ಲಿಂಗ ಬೇಧವಿಲ್ಲದೆ, ಮೇಲು–ಕೀಳು ತಾರತಮ್ಯವಿಲ್ಲದೇ, ಹಾಗೂ ಗುರು, ಲಿಂಗ, ಜಂಗಮ, ದಾಸೋಹಗಳ ಮಹತ್ವ ತಿಳಿಸುತ್ತಾ, ಸಾಮಾಜಿಕ ಜಾಗೃತಿಯನ್ನುಂಟು ಮಾಡಲು, ಶರಣರು ಮಾಡಿದ ಅವಿರತ ಪ್ರಯತ್ನದ ಫಲ ಈ ವಚನ ರಚನೆಗಳು, ಈ ವಚನಗಳ ಸಾರ ಇಂದಿಗೂ ಪ್ರಸ್ತುತವಾಗಿವೆ ಎಂಬುದು ಸ್ಪಷ್ಟ. ಜನ ಸಾಮಾನ್ಯರ ಭಾಷೆಯಲ್ಲಿ ವಚನ ರಚನೆಗಳಾಗಿವೆ. ಸರಳವಾಗಿ, ಸ್ಪಷ್ಟವಾಗಿ ಅರ್ಥೈಸಲು, ಅನ್ವಯಿಸಿಕೊಳ್ಳಲು ಸುಲಭವಾಗಿವೆ. ಜನ ಸಾಮಾನ್ಯರಷ್ಟೇ ಅಲ್ಲಾ ಪಂಡಿತರಿಂದ ಪಾಮರವರಿಗೆ ಎಲ್ಲರೂ ಇಂದಿಗೂ ಈ ವಚನಗಳಿಂದ ಆಕರ್ಷಿತರಾಗಿದ್ದಾರೆ. ಅಂದು ಹೊಸ ಸಮಾಜದ ರಚನೆಗೆ ಹೋರಾಟದ ಅಂಗವಾಗಿ ವಚನಗಳು ಬಳಕೆಯಾಗಿವೆ. ಬಿರುದು–ಸನ್ಮಾನಗಳಿಗಾಗಿ ವಚನಕಾರರು ಬರೆಯಲಿಲ್ಲಾ ಎಂಬುದು ಗಮನಾರ್ಹ. ಸಮಾಜ, ಕಾಯಕ, ದಾಸೋಹಸ್ತ್ರೀ ಸ್ವಾತಂತ್ರ್ಯ ಮತ್ತು ಸಾಮಾಜಿಕ ಪಿಡುಗುಗಳ ಬಗ್ಗೆ ಮುಂತಾದ ವಿಷಯಗಳ ಬಗ್ಗೆ ಸಾಕಷ್ಟು ಚರ್ಚೆಗಳು ಈ ವಚನಗಳಲ್ಲಿ ಅಭಿವ್ಯಕ್ತವಾಗಿರುವದನ್ನು ನಾವು ಮುಖ್ಯವಾಗಿ ಗಮನಿಸಬೇಕು.

ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಲು ರಚಿಸಿದ ವಚನಗಳು, ಸಮಕಾಲಿನ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಮಾಡಿದ ಒಂದು ಕ್ರಾಂತಿಕಾರಕ ಪ್ರಯತ್ನ. ವಚನಕಾರರು ವೀರಶೈವ ಲಿಂಗಾಯತ ಧರ್ಮ ಪ್ರತಿಪಾದಕರಾದರೂ ಅಪ್ಪಟ ವಿಶ್ವ ಮಾನವ ಪ್ರೇಮಿಗಳು, ಶೋಷಣೆಗೊಳಗಾಗಿ, ತುಳಿತಕ್ಕೊಳಗಾದವರನ್ನೆಲ್ಲಾ ಅಪ್ಪಿಕೊಂಡು ಅವರಿಗೆ ಧೈರ್ಯ–ಸ್ಥೈರ್ಯ ಆತ್ಮವಿಶ್ವಾಸ ತುಂಬಿದರು. ಕೆಳಮಟ್ಟದಿಂದಲೇ ಸಾಮಾಜಿಕ ಪರಿವರ್ತನೆಗೆ ಮುಂದಾದವರು ವಚನಕಾರರು.

> ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
> ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ.
> ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
> ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
> ಇದೇ ನಮ್ಮ ಕೂಡಲಸಂಗನೊಲಿಸುವ ಪರಿ.

ಮನುಷ್ಯರು ಯಾವಾಗಲೂ ಋಣಾತ್ಮಕವಾದ ಗುಣಗಳನ್ನು ಬಿಟ್ಟು, ಧನಾತ್ಮಕವಾದ ಗುಣಗಳನ್ನು ಹೊಂದಬೇಕು. ಒಮ್ಮೆ ನಾವು ಧನಾತ್ಮಕವಾದ ಒಲವುಗಳನ್ನು ರೂಡಿಸಿಕೊಂಡರೆ ನಮ್ಮ ವ್ಯಕ್ತಿತ್ವ, ಜೀವನ

ಪರಮಶುದ್ದಿಯನ್ನು ಪಡೆಯುತ್ತೇವೆ. ಸಮಾಜ, ದೇಶ, ನೆಮ್ಮದಿಯಿಂದಿರಬೇಕಾದರೆ ಇಂಥ ವಚನಗಳು ಸನ್ಮಾರ್ಗತೋರುತ್ತವೆ.

ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯ ಕೂಡಲಸಂಗಮ
ದೇವಾ ಕೇಳಯ್ಯಾ ಸ್ಥಾವರಕ್ಕಳಿವುಂಟು
ಜಂಗಮಕ್ಕಾಳಿವಿಲ್ಲಾ.

ಈ ಬಸವಣ್ಣನವರು ಬಡವರ ಪರವಾಗಿ ನಿಲ್ಲುತ್ತಾರೆ, ಅವರ ಪರವಾಗಿ ಸ್ಪಂದಿಸುವುದನ್ನು ಕಾಣುತ್ತೇವೆ. ಬಸವನ ಇಂಥ ವಿಚಾರಗಳು ಬಡವರ ಧೈರ್ಯ ಹೆಚ್ಚಿಸುತ್ತದೆ. ಸಮಾಜದಲ್ಲಿಯ ಮೌಲ್ಯಗಳನ್ನು ಪರಿವರ್ತನೆ ಮಾಡುವ ಮಾನವೀಯತೆ ಹೊಂದಿದವನು ಬಸವಣ್ಣ. ಮನುಷ್ಯನ (ವ್ಯಕ್ತಿ) ಜೀವನ-ಸಮಾಜದ ಉದ್ಧಾರ ಎರಡೂ ವಚನಕಾರರಿಗೆ ಮುಖ್ಯ.
ಕಾಯಕದ ಮಹತ್ವವನ್ನು ವಚನಕಾರರು ಹೇಳುವುದಲ್ಲದೇ ಕಾಯಕ ನಿಷ್ಠೆಯಿಂದ ತಮ್ಮ ತಮ್ಮ ಕರ್ತವ್ಯ ನಿಭಾಯಿಸಿ ತೋರಿಸಿದ್ದಾರೆ. ಕಾಯಕ ಮಹತ್ವ ಕುರಿತ ಆಯ್ದಕ್ಕಿ ಲಕ್ಕಮ್ಮನ ಒಂದು ವಚನ ಹೀಗಿದೆ.

ಮನ ಶುದ್ಧ ವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ
ಎತ್ತ ನೋಡಿದತ್ತ ಲಕ್ಷ್ಮೀ ತಾನಾಗಿಪ್ಪಳು
ಮಾರಯ್ಯ ಪ್ರೀಯ ಅಮರೇಶ್ವರಲಿಂಗದ ಸೇವೆಯುಳ್ಳಕ್ಕಾ

ಚಿತ್ತ ಶುದ್ಧ ಕಾಯಕವೆಂದರೆ ಪರಿಶ್ರಮದಿಂದ ಮಾಡಿದ ಪ್ರಾಮಾಣಿಕ ದುಡಿಮೆ, ಬೇರೆಯವರ ಬೆವರ ಆಶ್ರಯಿಸಿ ಬೇಡ ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನ, ಮನ ಶುದ್ಧವಿದ್ದು ದುಡಿದರೆ ಯಾವ ಕಡೆಗೆತಿರುಗಿದರೂ ಸಂಪತ್ತು ತಾನಾಗಿಯೇ ಬರುತ್ತದೆ. ಕಾಯಕದ ಬಗ್ಗೆ ಆಯ್ದಕ್ಕಿ ಲಕ್ಕಮ್ಮ ಮತ್ತೊಂದು ವಚನದಲ್ಲಿ ಸಂಗ್ರಹ ಬುದ್ಧಿ ಮಾನವರಿಗಿರಬಾರದು, ಈ ನಿಸರ್ಗದ ಸಂಪತ್ತು ಎಲ್ಲರಿಗೂ ಸಿಗಬೇಕು. ಎಂಬುದು ಅವಳ ವಚನದ ಅರ್ಥ.

ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮದೂತರಿಗಲ್ಲದೇ ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯ ಪ್ರೀಯ ಅಮರೇಶ್ವರ ಲಿಂಗ ದೂರ ಮಾರಯ್ಯ

ಕಾಯಕ ದಾಸೋಹದ ವಿಷಯವಾಗಿ ವಚನಕಾರರ ವಿಚಾರಗಳು ಇಂದಿಗೂ ಅರ್ಥಪೂರ್ಣವಾದವುಗಳು,

ದಾಸೋಹವೆಂಬುದು ಸೊಹೆಗೋಂಡ ಹೊಗಿ
ಗುರುವ ಕಂಡೆ ಲಿಂಗವ ಕಂಡೆ
ಜಂಗಮ ಕಂಡೆ ಪ್ರಸಾದವ ಕಂಡೆ
ಇಂತಿಚತುರ್ವಿದ ಸಂಪನ್ನನ್ನಾದ
ಕಾಣಾಕೂಡಲಸಂಗಮದೇವಾ

ಯಾರನ್ನು ಮೇಲು ಕೀಳು ಎಂದು ಬಗೆದವರೆಲ್ಲಾ ವಚನಕಾರರು, ಅವರು ಎಲ್ಲರನ್ನೂ ಸಮಾನ ದೃಷ್ಟಿಯಿಂದ, ಎಲ್ಲ ಜಾತಿಯವರನ್ನು ಅಪ್ಪಿಕೊಳ್ಳುತ್ತಿದ್ದರೆಂಬುದಕ್ಕೆ ಹಲವು ವಚನಗಳೇ ಆಧಾರ.

ಮತ್ತೊಂದು ವಚನದಲ್ಲಿ
ಇವನಾರವ ‘ಇವನಾರವ ಇವನಾರವನೆಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮನೆಂದೆನಿಸದಿರಯ್ಯ

ಎಂದು ಎಲ್ಲರನ್ನು ತಮ್ಮವರಂತೆಯೇ ಕಂಡ ಮಹಾನ್ ಚೇತನಗಳೇ ವಚನಕಾರರು.

ಊರೋಳಗಿರ್ದಡೆ ಸಂಸಾರಿಕನೆಂಬರು.
ಅಡವಿಯೊಳಗಿರ್ದೊಡೆ ಮರ್ಕಟನೆಂಬರು......................

ಎಂಬ ಮಡಿವಾಳ ಮಾಚಿದೇವನ ವಚನ ಹಾಗೂ ಅಕ್ಕಮಹಾದೇವಿಯ ಈ ಕೆಳಗಿನ ವಚನ ಜನಸಾಮಾನ್ಯರಿಗೆ, ನೊಂದವರಿಗೆ, ಮುಗ್ದರಿಗೆ, ಅದೆಷ್ಟು ದೈರ್ಯ-ಸ್ಥೈರ್ಯ ತುಂಬಿದೆ ಎಂದರೆ ವಿವರಿಸಲುಸಾಧ್ಯ

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ?
ಸಂತೆಯೊಳಗೋಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ ಈ
ಲೋಪದೊಳಗೆ ಹುಟ್ಟಿದ ಬಳಿಕ
ಸ್ತುತಿ-ನಿಂದೆಗಳು ಬಂದರೆ ಮನದಲ್ಲಿ
ಕೋಪದ ತಾಳದೆ ಸಮಾಧಾನಿಯಾಗಿರವಬೇಕು

ಅಕ್ಕನ ಈ ವಚನ ಎಷ್ಟು ಮೌಲ್ಯಯುತವಾದದ್ದು “ಊರ ಮುಂದಿನ ಹೊಲದಲ್ಲಿ ಕುಂಟೆ ಹೂಡಿದರೆ ಕೆಲವರು ಕಡದ ಅಂದರೆ ಕೆಲವು ಬಳದ ಅಂತಾರೆ” ಅಂದರೆ ಜನ ಹಾಗೂ, ಹೀಗೂ ಹೇಗೆಗೋ ಮಾತಾಡುತ್ತಾರೆ. ಮಾಲಿನ್ಯದಿಂದ ಕೂಡಿದ ಲೋಕದಲ್ಲಿ ನಾವು ಎಲ್ಲವನ್ನು ಸಮಾಧಾನದಿಂದ ಅನಿವಾರ್ಯವಾಗಿ ಸಹಿಸಿಕೊಳ್ಳಲೇ ಬೇಕು.ಎಂದು ವಚನಗಾರ್ತಿ ನೊಂದವರಿಗೆ ಹೇಳು ಮಾತು, ಈ ಲೋಕದ ನೀಚ ಜನರ ಬಗ್ಗೆ ಜಿವನ ಸಮಸ್ಯೆಗಳ ಬಗ್ಗೆ, ಜನರ ಚುಚ್ಚು ಮಾತುಗಳ ಬಗ್ಗೆ, ತಲೆಕೆಡಿಸಿಕೊಳ್ಳದೆ ಸಮಾಧಾನದಿಂದ ಇರುವುದು ಆರೋಗ್ಯಕರ ಜೀವನ ಎಂದು ಹೇಳಿದ್ದು ಎಷ್ಟು ಅರ್ಥಪೂರ್ಣ ಮತ್ತು ಇಂದೂ ಸಹ ಪ್ರಸ್ತುತ.
ಈ ಜಗದ ಜನರ ಮೂಲಭೂತ ಅವಶ್ಯಕತೆಗಳೆಲ್ಲಾ ಒಂದೇ ರೀತಿಯಾಗಿವೆ. ಅಷ್ಟೇ ಯಾಕೆ ಪ್ರಾಣಿ ಪಕ್ಷಿಗಳಿಗೂ ಸಹ ಮನುಷ್ಯತ್ವ, ಭೂಮಿಯ ಮೇಲಿನ ಎಲ್ಲಜನರಲ್ಲೂ ಇರಬೇಕು. ಅಷ್ಟೇ ಅಲ್ಲಾ ಭೂಮಿ ಮೇಲೆ ಎಲ್ಲಜಿವಿಗಳನ್ನು ಪ್ರೀತಿ-ಆಧರಗಳಿಂದ ಕಾಣಬೆಕು. ಅದರಲ್ಲೂ ಮನುಷ್ಯರನ್ನು ಈ ವಿಚಾರಕ್ಕೆ ಪೂರಕವಾಗಿ ವಚನಕಾರರು ಹೀಗೆ ಹೇಳುತ್ತಾರೆ.

ದಯವಿಲ್ಲಲದ ಧರ್ಮಯಾವುದಯ್ಯ?
ದಯಬೇಕು ಸಕಲ ಪ್ರಾಣಿಗಳಲ್ಲಿ

ದಯವೇ ಧರ್ಮದ ಮೂಲ ಅವಜ್ಞೆಗೆ ಒಳಗಾದ ಜನರನ್ನೆಲ್ಲಾ, ವಿಶಾಲವಾದ ತಳಹದಿಯ ಮೇಲೆ ಪುನರ್ಜ್ಜೀವಿತವಾದ ವೀರಶೈವ ತೋಳತೆಕ್ಕೆಯಲ್ಲಿ ತಬ್ಬಿ, ಅಂಥವರಿಗೆ ಇಹಪರಗಳೆರಡರಲ್ಲೂ ಸ್ಥಾನ

ಮಾನಗಳನ್ನು ವಚನಕಾರರು ಕಲ್ಪಿಸಿಕೊಟ್ಟರು, ವಿಶ್ವಧರ್ಮದ ಅಭಿಮತವೇ ವಚನಕಾರರ ಮತ, ಧರ್ಮದಿಂದ ಶಾಂತಿ ಸಾಧ್ಯಎಂಬುದು. ಶರಣರ ನಡೆ–ನುಡಿ ಅವರು ರಚಿಸಿದ ವಚನಗಳಿಂದ ಸ್ಪಷ್ಟ.

ಮಾನವ ಧರ್ಮ, ಕಾಯಕ, ದಾಸೋಹ, ಸ್ತ್ರೀ ಸ್ವಾತಂತ್ರ್ಯಗಳ ಬಗ್ಗೆ ಜಾಗೃತಿ ಮೂಡಿಸಿದಲ್ಲದೇ ಸಮಜದ ಮೌಢ್ಯಗಳ ಬಗ್ಗೆ, ಸಂಪತ್ತು ಸಂಗ್ರಹದ ಬಗ್ಗೆ, ಜಾತಿ ಮಾಡುವವರ ಬಗ್ಗೆ, ಢಾಂಬಿಕತೆ ಬಗ್ಗೆ, ವಿರೋಧಿಸಿದ್ದಾರೆ. ಸಾಮಾಜಿಕ ನ್ಯಾಯದ ಪರವಾಗಿದ್ದು ಸಕಲ ಜೀವಿಗಳಲ್ಲಿ ಲೇಸನೆ ಬಯಸಿದವರು ವಚನಕಾರರ,ಅವರ ವಚನಗಳು ಸರಳ, ಸ್ಪಷ್ಟ. ಹರಿದು ತಿನ್ನಬೇಡಿ, ಕರೆದು ಹಂಚಿ ತಿನ್ನಬೇಕು, ಎಂಬುದು ವಚನಕಾರರ ಆಶಯವಾಗಿದೆ. ಯಾರನ್ನು ದೂರ ಮಾಡಿದವರಲ್ಲ, ಯಾವ ಜನಾಂಗವನ್ನು, ಧರ್ಮವನ್ನು ಒಡೆದವರಲ್ಲಾ, ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬುದನ್ನು ಸಾರಿದವರು. ಶರಣರು ಅವರೇ ಹೇಳಿದ ಹಾಗೆ “ಅರಿತರೆ ಶರಣ–ಮರೆತರೆ ಮಾನವ” ಎಂದಿದ್ದಾರೆ. ಶರಣರಾಗುವುದು–ಮಾನವರಾಗುವುದು ಅವರವರಿಗೆ ಬಿಟ್ಟವಿಚಾರ.